## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೋವಿಡ್ 19 ತಡೆಗಟ್ಟುವ ನಿಟ್ಟಿನಲ್ಲಿ ಆರಂಭಿಸಲಾಗಿರುವ ಸಹಾಯವಾಣಿ ಕೇಂದ್ರಕ್ಕೆ ನೇಮಿಸಲಾದ ಗೃಹ ರಕ್ಷಕ ಸಿಬ್ಬಂದಿಗಳಿಗೆ ವೇತನವನ್ನು ಪಾವತಿಸುವ ಬಗ್ಗೆ.

ಓದಲಾಗಿದೆ:-

1. ಸರ್ಕಾರದ ಕಾರ್ಯದರ್ಶಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಪತ್ರ ದಿನಾಂಕ: 28/03/2020, 04/04/2020 ಮತ್ತು 14/04/2020.
2. ಸರ್ಕಾರದ ಪತ್ರ ಸಂಖ್ಯೆ: ಕಾಇ 170 ಸ್ಕೀಮರ 2018, ದಿನಾಂಕ: 30/03/2020
3. ಆರಕ್ಷಕ ಮಹಾ ನಿರ್ದೇಶಕರು, ಗೃಹರಕ್ಕ ದಳದ ಮಹಾ ಸಮಾದೇಷ್ಟರು ಮತ್ತು ನಿರ್ದೇಶಕರು ಪೌರರಕ್ಷಣೆ ಇವರ ಮಂಜೂರಾತಿ ಆದೇಶ ದಿನಾಂಕ: 16/04/2020 & 17/04/2020
4. ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಪತ್ರ ಸಂಖ್ಯೆ: ವಾಸಾಸಂಇ/ಕೋವಿಡ್ 19/2020-21, ದಿನಾಂಕ: 15/04/2020

*******

ಪ್ರಸ್ತಾವನೆ:-

ಮೇಲೆ ಓದಲಾದ ಕ್ರ.ಸಂ. 1ರ ದಿನಾಂಕ: 28/03/2020ರ ಪತ್ರದಲ್ಲಿ ಕೋವಿಡ್ 19 ತಡೆಗಾಗಿ ಆರಂಭಿಸಲಾದ ಸಹಾಯವಾಣಿ ಕೇಂದ್ರಕ್ಕೆ 20 ಗೃಹ ರಕ್ಷಕ ದಳ ಸೆಕೆಂಡ್ ಇನ್ ಕಮಾಂಡ್, ಬೆಂಗಳೂರು ದಕ್ಷಿಣ, ಗೃಹ ರಕ್ಷಕ ದಳ ನೇತೃತ್ವದಲ್ಲಿ ದಿನಾಂಕ: 28/03/2020 ರಿಂದ ಏಪ್ರಿಲ್ 15, 2020ರವರೆಗೆ ನಿಯೋಜಿಸಲು ಕೋರಲಾಗಿತ್ತು.

ಮೇಲೆ ಓದಲಾದ ಕ್ರ.ಸಂ. 2ರ ಪತ್ರದಲ್ಲಿ ಕೋವಿಡ್ 19 ಲಾಕ್ ಡೌನ್ ತುರ್ತು ಹಿನ್ನಲೆಯಲ್ಲಿ ಕಾರ್ಮಿಕರಿಗೆ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸಿಬ್ಬಂದಿಯ ಕೊರತೆ ಇದ್ದುದರಿಂದ ಸ್ವಯಂ ಸೇವಕರನ್ನು/ಸಿವಿಲ್ ಡಿಫೆನ್ಸ್/ ಹೊಂ ಗಾರ್ಡ್ಸ್ ಗಳನ್ನು ನೇಮಕ ಮಾಡಿ ಕಾರ್ಮಿಕ ಇಲಾಖೆಯ ವಶಕ್ಕೆ ನೀಡುವಂತೆ ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರ.ಸಂ. 1ರ ದಿನಾಂಕ: 04/04/2020ರ ಪತ್ರದಲ್ಲಿ ಹೆಚ್ಚುವರಿಯಾಗಿ 100 ಜನ ಗೃಹ ರಕ್ಷಕರನ್ನು ದಿನಾಂಕ: 31/03/2020 ರಂದು ನಿಯೋಜಿಸಿಕೊಂಡಿದ್ದು, ದಿನಾಂಕ: 15/04/2020 ರವರೆಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಮುಂದುವರೆಸಲು ಕೋರಲಾಗಿತ್ತು.

....2

ಮೇಲೆ ಓದಲಾದ ಕ್ರ.ಸಂ. 2ರ ದಿನಾಂಕ: 14/04/2020ರ ಪತ್ರದಲ್ಲಿ ಒಟ್ಟಾರೆ 120 ಸಿಬ್ಬಂದಿಗಳನ್ನು ನಿಯೋಜಿಸಿಕೊಂಡಿದ್ದು, ಸದರಿ 120 ಗೃಹ ರಕ್ಷಕ ಸಿಬ್ಬಂದಿಗಳನ್ನು ದಿನಾಂಕ: 03/05/2020 ವರೆಗೆ ಮುಂದುವರೆಸಲು ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. 3ರ ದಿನಾಂಕ: 16/04/2020 ಮತ್ತು 17/04/2020ರ ಮಂಜೂರಾತಿ ಆದೇಶಗಳಲ್ಲಿ ಒಟ್ಟು 120 ಗೃಹ ರಕ್ಷಕರನ್ನು ದಿನಾಂಕ: 28/03/2020 ರಿಂದ 03/05/2020 ರವರೆಗೆ ಷರತ್ತಿಗೊಳಪಟ್ಟು ಕರ್ತವ್ಯಕ್ಕೆ ನಿಯೋಜಿಸಲು ಮಂಜೂರಾತಿ ನೀಡಲಾಯಿತು.

ಮೇಲೆ ಓದಲಾದ ಕ್ರ.ಸಂ. 4ರ ದಿನಾಂಕ: 15/04/2020 ರ ಪತ್ರದಲ್ಲಿ ಆಯುಕ್ತರು ನೇಮಕಗೊಂಡ 120 ಸಿಬ್ಬಂದಿಗಳ ದೃಢೀಕೃತ ಹಾಜರಾತಿ ಪ್ರತಿಯನ್ನು ಸಲ್ಲಿಸುತ್ತಾ, ಸದರಿಯವರಿಗೆ ಕಾರ್ಮಿಕ ಇಲಾಖೆಯಿಂದ ಗೌರವ ಧನ ನೀಡುವ ಬಗ್ಗೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸದರಿ ನಿಯೋಜನೆಗೊಂಡ 120 ಗೃಹರಕ್ಷಕರಿಗೆ ದಿನವೊಂದಕ್ಕೆ ರೂ 455/-ರಂತೆ ಕರ್ತವ್ಯ ಭತ್ಯೆಯನ್ನು ನಿಗದಿಪಡಿಸಲಾಗಿರುತ್ತದೆ. ಈ 120 ಗೃಹರಕ್ಷಕರಿಗೆ ಪಾವತಿಸಬೇಕಾದ ವೇತನವನ್ನು ಈ ಕೆಳಗಿನಂತೆ ಭರಿಸಲು ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ಕಾಇ: 144 ಎಲ್ಇಟಿ 2020, ಬೆಂಗಳೂರು**

**ದಿನಾಂಕ:27/04/2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೋವಿಡ್ 19 ತಡೆಗಟ್ಟುವ ನಿಟ್ಟಿನಲ್ಲಿ ಒಟ್ಟು 120 ಸಂಖ್ಯೆಯ ಗೃಹ ರಕ್ಷಕರನ್ನ **ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಲು ಚೌಲ್ಟ್ರಿಗಳಲ್ಲಿ ಭದ್ರತೆ ಹಾಗೂ ಅಹಾರ ವಿತರಣೆಗಾಗಿ ದಿನಾಂಕ: 28/03/2020 ರಿಂದ 03/05/2020 ರವರೆಗೆ ನಿಯೋಜಿಸಲಾಗಿದೆ.**

ಸದರಿ 120 ಗೃಹ ರಕ್ಷಕರಿಗೆ ದಿನಾಂಕ: 28/03/2020 ರಿಂದ 03/05/2020 ರವರೆಗೆ ದಿನವೊಂದಕ್ಕೆ ತಲಾ ರೂ.455/ ರಂತೆ ಕರ್ತವ್ಯ ಭತ್ಯೆಯನ್ನು ಪಾವತಿಸಲು ತಗಲುವ ವೆಚ್ಚದಲ್ಲಿ ಶೇ 75% ರಷ್ಟು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ಶೇ.25% ರಷ್ಟು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಭರಿಸತಕ್ಕದ್ದು.

ಸದರಿ ಅನುದಾನವನ್ನು ನಿಯಮಾನುಸಾರ ಮಾತ್ರ ವೆಚ್ಚ ಮಾಡಲು ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಂಧ್ಯಾ.ಎಲ್. ನಾಯಕ್))
ಸರ್ಕಾರದ ಉಪ ಕಾರ್ಯದರ್ಶಿ
ಕಾರ್ಮಿಕ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಜಿ&ಎಸ್ಎಸ್ಎ)(ಎ&ಆರ್ಎಸ್ಎ)(ಎ&ಇ) ಕರ್ನಾಟಕ, ಬೆಂಗಳೂರು.

.....3

2. ಸರ್ಕಾರದ ಕಾರ್ಯದರ್ಶಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಿಕಾಸ ಸೌಧ, ಬೆಂಗಳೂರು
3. ಆರಕ್ಷಕ ಮಹಾ ನಿರ್ದೇಶಕರು, ಗೃಹರಕ್ಷಕ ದಳದ ಮಹಾ ಸಮಾದೇಷ್ಟರು ಮತ್ತು ನಿರ್ದೇಶಕರು ಪೌರರಕ್ಷಣೆ, ಬೆಂಗಳೂರು.
4. ಆಯುಕ್ತರು, ಕಾರ್ಮಿಕ ಇಲಾಖೆ, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.
5. ಕಾರ್ಯದರ್ಶಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ ಬೆಂಗಳೂರು.
6. ಸೆಕೆಂಡ್ ಇನ್ ಕಮಾಂಡ್, ಬೆಂಗಳೂರು ದಕ್ಷಿಣ, ಗೃಹ ರಕ್ಷಕ ದಳ, ಬೆಂಗಳೂರು.
7. ಜಂಟಿ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ ಬೆಂಗಳೂರು.

ಪ್ರತಿ:

1. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
2. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.